ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಹೊಸೂರು ಗ್ರಾಮಸ್ಥರ ಪಾಲಿಗೆ ವರದಾನವಾದ ಮನೆ ಮನೆಗೆ ಗಂಗೆ ಯೋಜನೆ




ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ಇಂದು ಸಾಕಷ್ಟು ಅಭಿವೃದ್ಧಿ ಹೊಂದಿದ್ದು, ಮೊದಲಿನ ಸ್ಥಿತಿಗತಿಗಳಿಗೆ ಹೋಲಿಸಿದರೆ ಹಲವಾರು ಬದಲಾವಣೆಗಳಾಗಿವೆ. ಆದ್ರೆ ಈ ಮೊದಲು ತಾಲ್ಲೂಕಿನಲ್ಲಿ ನೀರಿನ ಸಮಸ್ಯೆ ಜನರನ್ನು ಬಹುವಾಗಿ ಕಾಡಿತ್ತು. ಕಾವೇರಿ ನದಿಯ ಉಪನದಿಯಾದ ಲಕ್ಷ್ಮಣತೀರ್ಥ ನದಿಯು ಕೃಷಿ ಚಟುವಟಿಗಳನ್ನು ಅವಲಂಬಿಸಿರುವ ಹುಣಸೂರು ತಾಲ್ಲೂಕಿನ ಜನರಿಗೆ ವರದಾನವಾಗಿತ್ತು. ಆದರೂ ತಾಲ್ಲೂಕಿನ ಸಾಕಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮಾತ್ರ ಹೇಳತೀರದಾಗಿತ್ತು.

**ಹೊಸೂರು ಗ್ರಾಮದ ಜನರನ್ನು ಬಹುವಾಗಿ ಕಾಡಿದ ನೀರಿನ ಸಮಸ್ಯೆ**

ಹುಣಸೂರು ತಾಲ್ಲೂಕಿನಿಂದ ಸುಮಾರು 12 ಕಿ.ಮೀ ದೂರದಲ್ಲಿರುವ ಉದ್ದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸೂರು ಗ್ರಾಮದಲ್ಲಿಯೂ ಸಾಕಷ್ಟು ವರ್ಷಗಳಿಂದ ನೀರಿನ ಅಭಾವ ಕಾಡುತ್ತಿತ್ತು. ಇಲ್ಲಿನ ಜನರು ಜೀವನಕ್ಕಾಗಿ ಕೂಲಿ ಕೆಲಸ ಮಾಡಲು ಬೇರೆ ಊರಿಗೆ ಹೋಗಬೇಕಾಗಿತ್ತು.

ಇದರ ಮಧ್ಯೆ ಕುಡಿಯಲು, ಸ್ನಾನ, ಬಟ್ಟೆ ತೊಳೆಯಲು ಹಾಗೂ ಜಾನುವಾರುಗಳಿಗೆ ಸಮರ್ಪಕವಾಗಿ ನೀರು ಸಿಗದೆ ಮಹಿಳೆಯರು, ಮಕ್ಕಳು ಪರದಾಡುವಂತಾಗಿತ್ತು.

ಹೊಸೂರು ಗ್ರಾಮದಲ್ಲಿ 138 ಮನೆಗಳಿದ್ದು, ಎಲ್ಲರೂ ಸಹ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರಾಗಿರುತ್ತಾರೆ. 138 ಮನೆಗಳು 554 ಜನಸಂಖ್ಯೆಯನ್ನು ಹೊಂದಿದ್ದು, 50000 ಲೀ. ಸಾಮರ್ಥ್ಯದ 1 ಒ.ಎಚ್.ಟಿ ಯನ್ನು ಹೊಂದಿದ್ದರೂ ಸಹ ಅದು ದುರಸ್ತಿ ಹಂತದಲ್ಲಿತ್ತು. ಆದ್ದರಿಂದ ಜನರಿಗೆ ಬೇಕಾದಷ್ಟು ನೀರನ್ನು ಪೂರೈಸಲು ಸಾಧ್ಯವಾಗುತ್ತಿರಲಿಲ್ಲ. ಹೊಸೂರು ಗ್ರಾಮದ ಜನರೆಲ್ಲರೂ ಕೃಷಿ ಚಟುವಟಿಕೆ ಹಾಗೂ ಕೂಲಿಯನ್ನು ಅವಲಂಬಿಸಿದ್ದು, ರಾಗಿ, ಭತ್ತ, ಜೋಳ, ದ್ವಿದಳ ಧಾನ್ಯಗಳು, ತಂಬಾಕು ಮತ್ತಿತರ ರೀತಿಯ ಬೆಳೆಗಳನ್ನು ಬೆಳೆಯುತ್ತಿದ್ದು, ಕೃಷಿ ಚಟುವಟಿಕೆಗಳಿಗೂ ನೀರಿನ ಅಭಾವ ಕಾಡುತ್ತಿತ್ತು.

# ಗ್ರಾಮದ ಚಿತ್ರಣ ಬದಲಿಸಿದ ಜಲಜೀವನ್ ಮಿಷನ್

ಜಲಜೀವನ್ ಮಿಷನ್ ಯೋಜನೆಯಿಂದಾಗಿ ಗ್ರಾಮದ ಚಿತ್ರಣವೇ ಈಗ ಬದಲಾಗಿದ್ದು, ಜನರು ಸಂತೋಷದಿಂದ ಬದುಕುವಂತಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಬಹುಮುಖ್ಯ ಯೋಜನೆಯಾದ ಜಲಜೀವನ್ ಮಿಷನ್ ಯೋಜನೆಯ ಕುರಿತು ಗ್ರಾಮಸ್ಥರಲ್ಲಿ ಅರಿವು ಮೂಡಿಸಿ, ಮನೆ ಮನೆಗೆ ಗಂಗೆ ಎಂಬ ಪರಿಕಲ್ಪನೆಯಡಿ ಪ್ರತಿ ಮನೆಗೂ ಶುದ್ಧ, ಸುರಕ್ಷಿತ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಇದರಿಂದ ಮಹಿಳೆಯರು ನೀರಿಗಾಗಿ ಕಿಲೋಮೀಟರ್ ಗಟ್ಟಲೆ ನಡೆಯಬೇಕಾದ ಪರಿಸ್ಥಿತಿಯಿಲ್ಲ. ಜೊತೆಗೆ ಗ್ರಾಮದ ಅಂಗನವಾಡಿ, ಶಾಲೆಗಳಿಗೆ ನೀರಿನ ಸೌಲಭ್ಯ ವ್ಯವಸ್ಥೆ ಕಲ್ಪಿಸಿದ್ದು, ಮಕ್ಕಳ ಉತ್ತಮ ಕಲಿಕೆಗೂ ಇದು ಸಹಕಾರಿಯಾಗಿದೆ.




**ಜಲಜೀವನ್ ಮಿಷನ್ ಯೋಜನೆಯು ಹೊಸೂರು ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿದ್ದು, ಗ್ರಾಮದ ಜನರು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಅಲ್ಲದೇ, ನೀರಿನ ಮಹತ್ವವನ್ನು ಅರಿತಿರುವ ಜನರು ನೀರನ್ನು ಅನಗತ್ಯವಾಗಿ ವ್ಯಯ ಮಾಡದೇ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.**





